# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ, ಭಾರತ

**ಯುವ ರೆಡ್ ಕ್ರಾಸ್ ಘಟಕ**

ದೂರವಾಣಿ ಸಂ. 08472-263202 ಫ್ಯಾಕ್ಸ್ 08472-263206, ಇ-ಮೇಲ್: **registrargug@rediffmail.com**


ಸಂ. ಗುವಿಕ:ಯುವ ರೆಡ್‌ಕ್ರಾಸ್:2025-26:

ದಿನಾಂಕ: 18.12.2025

**ಸುತ್ತೋಲೆ**

ಗುಲಬರ್ಗಾ ವಿಶ್ವವಿದ್ಯಾಲಯವು ಈಗಾಗಲೇ ದಿನಾಂಕ 26.07.2024, 18.09.2024 ಮತ್ತು 04.03.2025 ರಂದು ಹೊರಡಿಸಿದ ಸುತ್ತೋಲೆಗಳಲ್ಲಿ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಇನ್ನೂ ಕೆಲವು ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು ಇದುವರೆಗೂ **ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು** ಇವರಿಂದ **ಶಾಶ್ವತ ಸದಸ್ಯತ್ವವನ್ನು ಪಡೆಯದ ಮಹಾವಿದ್ಯಾಲಯಗಳು** ಆದಷ್ಟು ಬೇಗನೆ ಶುಲ್ಕ ರೂ. 1500/- (ಹದಿನೈದು ನೂರು ರೂಪಾಯಿಗಳನ್ನು ಮಾತ್ರ) ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಹೆಸರಿಗೆ ಡಿ.ಡಿ.ಯ ಮುಖಾಂತರ ಒದಗಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಕಡ್ಡಾಯವಾಗಿ ಶಾಶ್ವತ ಸದಸ್ಯತ್ವವನ್ನು ಪಡೆಯಲು ತಿಳಿಸಲಾಗಿತ್ತು. ಇತ್ತೀಚೆಗೆ ಆನ್‌ಲೈನ್ ಮುಖಾಂತರ ಶುಲ್ಕ ಸಂದಾಯ ಮಾಡಲು ಅವಕಾಶ ಮಾಡಿಕೊಟ್ಟಿದ್ದು, ಈ ವೆಬ್‌ಸೈಟ್ ಮುಖಾಂತರ https://redcrosskarnataka.org IRCS Website ನಲ್ಲಿ ಲಾಗಿನ್ ಆಗಿ ಆನ್‌ಲೈನ್‌ನಲ್ಲಿ ಶುಲ್ಕ ಸಂದಾಯಿಸಿದ ತಕ್ಷಣವೇ Certificate of Affiliation (ಶಾಶ್ವತ ಸದಸ್ಯತ್ವದ) ಪ್ರಮಾಣ ಪತ್ರ, ರಸೀದಿಯೊಂದಿಗೆ Generate ಆಗುತ್ತದೆ.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ IRCS/YRC/SME/576-605/2025-26, ದಿನಾಂಕ 28.05.2025 ರಂತೆ **ಇದುವರೆಗೂ ಇನ್ನೂ ಅನೇಕ ಮಹಾವಿದ್ಯಾಲಯಗಳು** ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ **ಶಾಶ್ವತ ಸದಸ್ಯತ್ವವನ್ನು** ಪಡೆದಿರುವುದಿಲ್ಲವೆಂದು (ಪಟ್ಟಿಯನ್ನು ಲಗತ್ತಿಸಲಾಗಿದೆ) ತಿಳಿಸಿರುತ್ತಾರೆ. ಅಲ್ಲದೇ, ಹಿಂದಿನ ವರ್ಷಗಳ ಅಂದರೆ, 2016-17 ರಿಂದ 2024-25 ರವರೆಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ರೆಡ್‌ಕ್ರಾಸ್ ಶುಲ್ಕದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ. 15.00 ರಂತೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಬೆಂಗಳೂರು ಇವರಿಗೆ ಸಂದಾಯ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇಂತಹ ಮಹಾವಿದ್ಯಾಲಯಗಳು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಿ ಆದಷ್ಟು ಬೇಗನೆ ಶಾಶ್ವತ ಸದಸ್ಯತ್ವವನ್ನು ಕಡ್ಡಾಯವಾಗಿ ಪಡೆಯಬೇಕೆಂದು, ತಪ್ಪಿದಲ್ಲಿ ಮಹಾವಿದ್ಯಾಲಯಗಳು ಮುಂದಿನ ಆಗುಹೋಗುಗಳಿಗೆ (Audit) ತಾವೇ ನೇರ ಹೊಣೆಗಾರರಾಗಿರುತ್ತೀರೆಂದು ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು, ಮಹಾವಿದ್ಯಾಲಯಗಳ ಪ್ರಾಂಶುಪಾಲರು ಮತ್ತು ಯುವ ರೆಡ್‌ಕ್ರಾಸ್ ಕಾರ್ಯಕ್ರಮಾಧಿಕಾರಿಗಳಿಗೆ ದಿನಾಂಕ 20.12.2025 ರಂದು ಬೆಳಿಗ್ಗೆ 11.30 ಗಂಟೆ GUK ಪ್ರಾಂಶುಪಾಲರ WhatsApp ಗ್ರೂಪ್‌ಗೆ ಶೇರ್ ಮಾಡುವ Link ಮುಖಾಂತರ Zoom Meeting ಗೆ ಭಾಗವಹಿಸಲು ತಿಳಿಸಲಾಗಿದೆ.

18/12/25

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಎಲ್ಲಾ ಪ್ರಾಂಶುಪಾಲರು.

ಪ್ರತಿಗಳು:

1. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಸಚಿವರ ಆಪ್ತ ಸಹಾಯಕ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಮಾಹಿತಿಗಾಗಿ.
2. ಮುಖ್ಯಸ್ಥರು, ಗಣಕ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ-ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.